# <u>ಸೇವಕತನದ ರುಚಿ ಏನಳೆದೆಯೋ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** Lyrics mentioned without highlights are as per Ref. 1. The wordings in Ref. 2 and Ref. 3 are slightly different and this difference is given in yellow highlights. Other differences are not considered here.
5. **Note:** Singer has followed these lyrics.

ರಾಗ: ತೋಡಿ ತಾಳ: ಆದಿ

ಸೇವಕತನದ ರುಚಿ ಏನಳೆದೆಯೋ
ದೇವ ಹನುಮರಾಯ ನೀ ವೈರಾಗ್ಯ ಬೇಡಿ || ಪ ||

ಉದಧಿಯ ದಾಟಿ ಸೀತೆಯ ಕಂಡು ಬಂದಾಗ
ಮದುವೆಯ ಮಾಡೆನ್ನಬಾರದಿತ್ತೇ
ಪದದಿ ಪಾಷಾಣವ ಪೆಣ್ಣ ಮಾಡಿದವನಿಗೆ
ಇದು ಏನು ಆಶ್ಚರ್ಯವೋ ನೀ ಬಯಸಲೊಲ್ಲದೆ || ೧ ||

ಕ್ಷಣದೊಳು ಸಂಜೀವನ ಗಿರಿ ತಂದಾಗ
(ಹಣ ಹೊನ್ನು) (ಧನವನು) ಬೇಡಲು ಕೊಡದಿಹನೇ
ವಿನಯದ ವಿಭೀಷಣಗೆ ರಾಜ್ಯಪದವನಿತ್ತ
ಇದು ಏನಾಶ್ಚರ್ಯವೊ ಹನುಮ ನೀನೊಲ್ಲದೆ || ೨ ||

ಸಾರ್ವಭೌಮನು ತಾನೆ ಮೆಚ್ಚಿ ಬಂದಾಗಲೆ
ಉರ್ವಿಯ ಬೇಡಲು ಕೊಡದಿಹನೇ

ಸರ್ವವ ತೊರೆದು ಶ್ರೀ ಪುರಂದರ ವಿಠಲನ
ನಿರ್ವ್ಯಾಜ ಭಕುತಿಯ ಬೇಡಿ ಕೊಂಡೆಯಲ್ಲದೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪಾದದಲ್ಲಿ ದಾಸರು ಹನುಮಂತನ ದಾಸ್ಯ ಭಾವದ ಮಹಿಮೆಯನ್ನು ದೃಷ್ಟಾಂತ ಕೊಟ್ಟು ವರ್ಣಿಸಿದ್ದಾರೆ.

**ಅರಿದ್ಯೋ** – ಅರಿತೆಯೊ.

**ಪದದಿ ಪಾಷಾಣ ಪೆಣ್ಣ ಮಾಡಿದವನಿಗೆ** – ರಾಮನು ತನ್ನ ಕಾಲುಗಳನ್ನು ಕಲ್ಲಿಗೆ ತಾಗಿಸಲಾಗಿ, ಶಾಪದಿಂದ ಕಲ್ಲಾಗಿದ್ದ ಅಹಲ್ಯೆಗೆ ಶಾಪ ನಿವೃತ್ತಿಯಾಗಿ, ಕಲ್ಲು ಹೆಣ್ಣಾಗಿ ಮಾರ್ಪಟ್ಟಿತೆಂಬ ಪ್ರಸಂಗ.

**ಕ್ಷಣದೊಳು ಸಂಜೀವನಗಿರಿ ತಂದಾಗ** – ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆಬಿದ್ದಾಗ, ಅವನನ್ನು ಬದುಕಿಸಲು ಹನುಮಂತನು ದೂರದಿಂದ ಸಂಜೀವನ ಬೆಟ್ಟವನ್ನು ಹೊತ್ತುತಂದ ಪ್ರಸಂಗ.

**ಉರ್ವಿಯ** – ಭೂಮಿಯನ್ನು.

**ನಿರ್ವ್ಯಾಜ ಭಕುತಿ** – ಯಾವ ಕಾಮನೆಯಿಲ್ಲದೆ, ತನ್ನ ಅಂತರ್ಯಾಮಿಯಾಗಿ, ಪ್ರೇರಕನೂ, ಆತ್ಮನೂ, ನಿಯಾಮಕನೂ ಆಗಿರುವ ಸ್ವಾಮಿಗೆ ತಾನು ಸ್ವರೂಪದಿಂದಲೇ ದಾಸ ಎನ್ನುವ ಭಕ್ತಿ.

**Classification:** Keerthane
**Ankita:** sri purandara vittala
**Location:** NA
**Category:** Hanuma Stuti
**Sub-Category:** hanuma, deva, Samudra, sita, maduve, visha, parvata, Vibhishana, bhumi, rama, bhakti,
**Pravachana:** Vid Kallapur Pavamanachar
**Explanation:** NA